## ಬಾಣಪ್ಪ ಮಂದಿರದ ಬಾಣಗಳು

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು ತಾಳ್ಯ ಗ್ರಾಮದ ಆಂಜನೇಯ ಸ್ವಾಮಿ ಮಂದಿರದ ಆವರಣದ ಎದುರಿಗೆ ಈ ಬಾಣಪ್ಪ ಮಂದಿರದ ಬಾಣಗಳಿವೆ. ಈ ಮಂದಿರ 12–13ನೇ ಶತಮಾನದಲ್ಲಿ ನಿರ್ಮಾಣವಾಗಿದ್ದು ಈ ಬಾಣಗಳನ್ನು ಯಾರು, ಯಾವಾಗ, ಎಲ್ಲಿಂದ ತಂದರೆಂದು ಗೊತ್ತಿಲ್ಲ. ಇಲ್ಲಿರುವ 2 ಬಾಣಗಳು ಶ್ರೀರಾಮನದ್ದು ಎಂಬ ಐತಿಹ್ಯವಿದೆ. ಆದರೆ ಈ ಗ್ರಾಮದ ಬಳಿ ಮುಂಚೆ ಕಬ್ಬಿಣದ ಅದಿರು ದೊರಕಿದ್ದು ಅದನ್ನು ಕರಗಿಸಿ ಈ ಆಕಾರ ಮಾಡಿರಬಹುದೆಂಬುದು ಇತಿಹಾಸ ಸಂಶೋಧಕರ ಅಭಿಪ್ರಾಯ. ಇವು ಈಟಿಯ ಆಕಾರದಲ್ಲಿದ್ದರೂ ಬಾಣವೆನ್ನುತ್ತಾರೆ. 20 ಅಡಿ ಉದ್ದ, 300 ಕೆ.ಜಿ. ಭಾರವಿರುವ ಈ ಬಾಣಪ್ಪಗಳನ್ನು ಉತ್ಸವದಲ್ಲಿ ಮೆರವಣಿಗೆ ಮಾಡುತ್ತಾರೆ. ಕನಿಷ್ಠವೆಂದರೂ 700–800 ವರ್ಷಗಳಾದರೂ ಸ್ವಲ್ಪವೂ ಸವೆದಿಲ್ಲ, ತುಕ್ಕು ಹಿಡಿದಿಲ್ಲ.

**–ಡಾ.ಕೆ.ವಿ. ಸಂತೋಷ್ ಹೊಳಲ್ಕೆರೆ, ಚಿತ್ರದುರ್ಗ**





## ಶತಮಾನದ ರೇಡಿಯೊ

ಟಿ.ವಿ. ಮೊಬೈಲ್‌ಗಳ ಭರಾಟೆಯಲ್ಲಿ ರೇಡಿಯೊ ಧ್ವನಿ ಯಾರಿಗೂ ಕೇಳದಾಗಿದೆ. ಬೆಂಗಳೂರಿನಂತಹ ಮೆಟ್ರೊ ನಗರಗಳಲ್ಲಿ ಎಫ್.ಎಂ. ರೇಡಿಯೊಗಳ ಸದ್ದು ಅಲ್ಲಲ್ಲಿ ಮತ್ತೆ ಕೇಳಿಬರುತ್ತಿದೆಯಾದರೂ ಹಿಂದಿನ ವೈಭವ ಅದಕ್ಕಿಲ್ಲ. ಹಿಂದಿನ ರೇಡಿಯೊದ ಗತವೈಭವವನ್ನು ನೆನಪಿಸುವಂತೆ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದ ಅಶೋಕ ವಿರೂಪಾಕ್ಷಪ್ಪ ತಿಪ್ಪಾ ಅವರ ಮನೆಯಲ್ಲಿ ಸುಮಾರು ನೂರು ವರ್ಷಗಳಷ್ಟು ಹಳೆಯದಾದ ರೇಡಿಯೊ ಮನೆಯವರ ಕಾಳಜಿಯಿಂದಾಗಿ ಇನ್ನೂ ಸುರಕ್ಷಿತವಾಗಿದೆ. 10 ಬ್ಯಾಂಡ್ ಹೊಂದಿರುವ ಇದರ ದೇಹವನ್ನು ಕಟ್ಟಿಗೆಯಿಂದ ಮಾಡಲಾಗಿದ್ದು ಆಕಾರದಲ್ಲಿ ಈಗೀನ ಟಿವಿಗಳಿಗಿಂತ ದೊಡ್ಡದಾಗಿದೆ. ಈಗಲೂ ಚಾಲೂ ಸ್ಥಿತಿಯಲ್ಲಿರುವ ಈ ರೇಡಿಯೊವನ್ನು ತಿಪ್ಪಾ ಮನೆತನದವರು ಕಾಳಜಿಯಿಂದ ಕಾಪಾಡಿಕೊಂಡು ಬಂದಿದ್ದಾರೆ.

**–ಸುರೇಶ ವಗ್ಗಾ, ಗುಳೇದಗುಡ್ಡ**

## ಸುಂದರ ಪಾರ್ಶ್ವನಾಥ

ಒಂಬತ್ತು– ಹತ್ತನೇ ಶತಮಾನದ ಹೊಂಬುಜ ಸಾಂತರ ಕಾಲದ್ದೆಂದು ಹೇಳಲಾಗುವ ಪಾರ್ಶ್ವನಾಥ ವಿಗ್ರಹವಿದು. ಬಗ್ಗುಂಜೆ ರಾಣಿಯ ಆರಾಧ್ಯ ದೇವನಾದ ಈ ಪಾರ್ಶ್ವನಾಥನ ವಿಗ್ರಹ ಕೊಪ್ಪ ತಾಲ್ಲೂಕು ಕಲ್ಲು ಬಸ್ತಿ ಎಂಬ ಊರಿನಲ್ಲಿತ್ತು. ಎರಡೂವರೆ ಅಡಿಯಷ್ಟು ಎತ್ತರವಿರುವ ಈ ಸುಂದರವಾದ ಪಾರ್ಶ್ವನಾಥನ ಅಕ್ಕಪಕ್ಕ ಯಕ್ಷ ಯಕ್ಷಿಯರನ್ನು ಕೆತ್ತಿದ್ದಾರೆ. ಪಚ್ಚೆಕಲ್ಲಿನಿಂದ ಮಾಡಿದ ಈ ಮನಮೋಹಕವಾದ ಪಾರ್ಶ್ವನಾಥ ಈಗ ಬೇರೆಡೆ ಪೂಜಿಸಲ್ಪಡುತ್ತಿದೆ.

**–ನ.ಸುರೇಶ ಕಲ್ಕೆರೆ, ಕೊಪ್ಪ**

